**ದಿನಾಂಕಃ 21.07.2026ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ವಿ.ಎನ್. ವಕೀಲರಿಂದಃ**

ನಾನು ಈ ಹಿಂದೆ ಪ್ರತಿವಾದಿಗಳ ವಿರುದ್ದ ಅಸಲು ದಾವೆ ನಂ.203/2007 ದಾವೆ ಹಾಕಿದ್ದೆ ಎಂದರೆ ಸರಿ. ದಿನಾಂಕ 28.07.2010 ರಂದು ಆ ದಾವೆಯನ್ನು ಹಿಂಪಡೆದಿದ್ದೆ ಎಂದರೆ ಸರಿ. ನನ್ನ ದೊಡ್ಡಪ್ಪನ ಮಗಳು ಅನುಸೂಯಮ್ಮರವರು ಚಿಂತಾಮಣಿ ನ್ಯಾಯಾಲಯದಲ್ಲಿ ಅಸಲು ದಾವೆ ನಂ.398/2012 ರಲ್ಲಿ ದಾವೆ ಹಾಕಿದ್ದರು ಎಂದರೆ ಅವರ ಕುಟುಂಬದ ಸದಸ್ಯರ ನಡುವೆ ಹಾಕಿದ್ದರು, ಆದರೆ ಆ ದಾವೆಯಲ್ಲಿ ಪ್ರತಿವಾದಿಗಳು ಪಕ್ಷಗಾರರಾಗಿದ್ದರು ಎಂದರೆ ಸರಿ. ನಂತರ ದಿನಾಂಕ 15.12.2015 ರಂದು ಸದರಿ ದಾವೆ ಭಾಗಶಃ ಡಿಕ್ರಿಯಾಗಿತ್ತು ಎಂದರೆ ಗೊತ್ತಿಲ್ಲ. ಮದನಪಲ್ಲಿ ನ್ಯಾಯಾಲಯದಲ್ಲಿ ಅಸಲು ದಾವೆ ನಂ.31/2020 ನಾನು ಪ್ರತಿವಾದಿಗಳ ವಿರುದ್ಧ ಇದೇ ದಾವಾ ಆಸ್ತಿಗೆ ಸಂಬಂಧಿಸಿ ವಿಭಾಗ ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ಈ ಎಲ್ಲಾ ಮೂರು ದಾವೆಗಳು ಪ್ರತಿವಾದಿಗಳ ಪರವಾಗಿ ಆದೇಶವಾಗಿದೆ ಎಂದರೆ ಸರಿಯಲ್ಲ. ದಿನಾಂಕ 13.11.1966 ರಲ್ಲಿ ಈಗಾಗಲೇ ನಮ್ಮ ಕುಟುಂಬದಲ್ಲಿ ಎಲ್ಲಾ ಕುಟುಂಬದ ಆಸ್ತಿಗಳು ನೋಂದಾಯಿತ ವಿಭಾಗಪತ್ರದ ಮೂಲಕ ವಿಭಾಗವಾಗಿತ್ತು ಎಂದರೆ ಸರಿಯಲ್ಲ. 1966 ರಿಂದ ನಾನು, ಪ್ರತಿವಾದಿಗಳ ಕುಟುಂಬದಿಂದ ಬೇರೆಯಾಗಿ ವಾಸವಿದ್ದೇನೆಂದರೆ ಸರಿಯಲ್ಲ. ನಾನು 1975 ರಿಂದ ಅಮ್ಮಗಾರಿಪೇಟೆ ಬಿಟ್ಟು ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಮದನಪಲ್ಲಿ ವಾಸವಿದ್ದೇನೆಂದರೆ ಸರಿ. ಮದನಪಲ್ಲಿಯಲ್ಲಿ ಮನೆ ಮತ್ತು ಖಾಲಿ ಜಾಗವನ್ನು ಖರೀದಿ ಮಾಡಿದ್ದೇನೆಂದರೆ ಸರಿಯಲ್ಲ, ಅದು ನನ್ನ ಅತ್ತೆಯವರದ್ದು. ನಾನು ನನ್ನ ಮನೆ ಮತ್ತು ಖಾಲಿ ಜಾಗವನ್ನು ಮಾರಾಟ ಮಾಡಿದ್ದೇನೆಂದರೆ ಸರಿ. ಅಮ್ಮಗಾರಿಪೇಟೆಯಲ್ಲಿ ಇರುವ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಉಳಿದಿಲ್ಲ ಎಂದರೆ ಸರಿಯಲ್ಲ. 2ನೇ ಮತ್ತು 4ನೇ

ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಆಸ್ತಿಯಲ್ಲಿ ಯಾವುದೇ ಭಾಗ ನನಗೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.